**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,**

**ಪೊನ್ನಂಪೇಟೆ.**

**ಸಿ.ಸಿ. ನಂ.**1768/2022 **DW -** 1

**ದಿನಾಂಕಃ** 09.02.2026 **ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿಯ ಹೆಸರು** : **ಭವ್ಯ ಸೋಮಣ್ಣ**

**ಗಂಡನ ಹೆಸರು** : **ಸೋಮಣ್ಣ**

**ವಯಸ್ಸು** : **40 ವರ್ಷ**

**ಉದ್ಯೋಗ** : **ಗೃಹಿಣಿ**

**ವಾಸ ಸ್ಥಳ** : **ಮಾಯಮುಡಿ**

**ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ. ಟಿ. ಹೆಚ್. ಪಿ. ವಕೀಲರಿಂದಃ-**

ಆಸ್ತಿಯ ಮಾರಾಟ ಮಾಡುವ ವಿಚಾರದಲ್ಲಿ ದೂರುದಾರರು ನನ್ನ ಗಂಡನಿಂದ ಪರಿಚಯ. ನಮ್ಮ ಆಸ್ತಿ ಮಾರಾಟ ಮಾಡುವಾಗ ನಮ್ಮ ಮನೆಗೆ ಗಂಡ ಹೆಂಡತಿ ಇಬ್ಬರು ಬಂದಿದ್ದರು. ನಾವು ಆ ಆಸ್ತಿಯನ್ನು ಬೇರೊಬ್ಬರಿಗೆ ಕೊಟ್ಟಿದ್ದು advance ಹಣ ಇತ್ತು. ನನ್ನ ಗಂಡ ಆ advance 5 ಲಕ್ಷ ಹಣವನ್ನು ಜೋಯಪ್ಪ ಅಂದರೆ ದೂರುದಾರರ ಗಂಡನವರಿಗೆ ಕೊಟ್ಟರು. ಬ್ಯಾಂಕ್ ಮೂಲಕ ಈಕೊಟ್ಟಿದ್ದು ಆ Bank statement ನೋಡಿ ಗುರುತಿಸಿದ್ದು ಅದನ್ನು ನಿ ಡಿ 1 ಎಂದು ಗುರುತಿಸಲಾಯಿತು. ಡಿಸೆಂಬರ್ 2021 ರಲ್ಲಿ ಆಸ್ತಿಯನ್ನು ಮಾರಾಟ ಮಾಡಿದೆವು. ನಮ್ಮ ಬಳಿ ಹಣ ಇರುವುದನ್ನು ಕೇಳಿಕೊಂಡು ರೂ. 25 ಲಕ್ಷ ಹಣ ಕೇಳಿದರು, ನಾವು ಕೊಡಲಿಲ್ಲ. ಕ್ರಯಪತ್ರ ಬರೆದುಕೊಡುವಾಗ ಜೋಯಪ್ಪನವರು ಇದ್ದು ಸಹಿ ಹಾಕಿದರು. ನನ್ನ ಗಂಡ ಅವರನ್ನು ಮನೆಗೆ ಊಟಕ್ಕೆ ಕರೆದರು. ಹುದಿಕೇರಿಯಲ್ಲಿ ನಮ್ಮ ಮನೆ ಕೆಲಸ ಆಗುತ್ತಿದ್ದು ನನ್ನ ತಂದೆ ಆ ಚೆಕ್ ಅನ್ನು ಕೊಡಲು ಮನೆಯಲ್ಲಿ ಆ ಚೆಕ್ ಅನ್ನು ಸಹಿ ಮಾಡಿ ಇಟ್ಟಿದ್ದೆ. ಅದನ್ನು ಇಬರಿಬ್ಬರು ಕದ್ದುಕೊಂಡು ಹೋಗಿರುತ್ತಾರೆ. ಅದನ್ನು ತಿಳಿದು Corporation bank ನಲ್ಲಿ stop payment instruction ಕೊಟ್ಟಿರುತ್ತೇನೆ. ಸಾಕ್ಷಿ ಅದನ್ನು ನೋಡಿ ಗುರು ತಿಸಿದ್ದು ಅದನ್ನು ನಿ ಡಿ 2 ಎಂದು ಗುರುತಿಸಲಾಯಿತು. ಜೋಯಪ್ಪನವರ ಹೆಂಡತಿ ನಿ ಪಿ

1 ಚೆಕ್ ನನ್ನ ಬಳಿ ಇದೆ, ಏನಾದರು ಮಾಡುತ್ತೇನೆಂದು Whats app message ಕಳುಹಿಸಿದರು. ಆ ಮೇಲೆ ನನ್ನ ಮೇಲೆ ಕೇಸ್ ಹಾಕಿದರು.

**ಪಾಟೀ ಸವಾಲುಃ–** ಆರೋಪಿ ಪರ ವಕೀಲರು ಸಮಯ ಕೋರಿದ್ದು, ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

**sd/–**

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ., ಪೊನ್ನಂಪೇಟೆ